

ಈ ಸಮಸ್ಯೆಯ ಹಾಗೂ ಪರಿಸರದ ಸಕಲ ಸಮಸ್ಯೆಗಳ ಪರಿಹಾರಕ್ಕಾಗಿ ಇರುವ ಒಂದೇ ದಾರಿಯೆಂದರೆ ಪರಿಸರ, ಕೃಷಿ ರಕ್ಷಣೆ ಮತ್ತು ರೈತರಕ್ಷಣೆಗಾಗಿ ಪ್ರತ್ಯೇಕವಾದ ಒಂದು ಖಾತೆಯನ್ನು ಕಟ್ಟಿಕೊಡುವುದು. ಅದು ಸರಕಾರದಿಂದ ಮಾತ್ರ ಸಾಧ್ಯ. ಪರಿಸರ ಕೆಡುವುದನ್ನು ತಡೆಯದೆ ಇದ್ದರೆ, ಕಾಡು ಮೇಡುಗಳಿಂದ ಕಂಗೊಳಿಸುವ ಪರಿಸರ ಎಷ್ಟು ಆಕರ್ಷಕವಾಗಿದ್ದರೂ ಇಲ್ಲಿ ನೆಮ್ಮದಿಯಿಂದ ಬದುಕಲು ಆಗುತ್ತಿಲ್ಲ ಎಂದು ಹೆಚ್ಚು ಹೆಚ್ಚು ಮಂದಿ ನಗರಕ್ಕೆ ವಲಸೆ ಹೋಗುತ್ತಾರೆ. ನಗರದಲ್ಲಿಯೂ ನೆಮ್ಮದಿ ನೀಡುವ ಪರಿಸರ ಇಲ್ಲ ಎಂದು ಶೀಘ್ರದಲ್ಲೇ ಅವರಿಗೆ ಅರಿವಾಗುತ್ತದೆ. ಆಗ ಹಳ್ಳಿಯ ಬದುಕಿನಲ್ಲಿ ಅನುಭವಿಸುತ್ತಿದ್ದ ಹಲವು ಬಗೆ ಕಷ್ಟಗಳನ್ನು ನೆನೆದು, ಆ ನಿರಂತರ ಗೋಳಿಗಿಂತ ಈ ನೆಮ್ಮದಿ ನೀಡದ ನೆಮ್ಮದಿಯೇ ಲೇಸು ಎಂದು ನಗರವಾಸದಲ್ಲಿ ನಲುಗುತ್ತಾ ದಿನ ತಳ್ಳುತ್ತಿರುತ್ತಾರೆ. ಅಂಗಡಿ ಪಿಂಗಡಿಗಳಿಂದ, ಮಾಲು ಮೋಲುಗಳಿಂದ ಬೇಕಾದ್ದನ್ನು ಕೊಂಡುಕೊಳ್ಳಲು ಕೈತುಂಬ ಹಣ ತರುವ ಹೂಡಿಕೆಗಳು, ಓಡಾಟಕ್ಕೆ ಕಾರು ಅದೆಲ್ಲ ಇದ್ದರೆ ಮಾತ್ರ ಹಳ್ಳಿಯ ಬದುಕು ಸುಂದರ ಎನ್ನುತ್ತಿರುತ್ತಾರೆ. 'ಹಣವಿದ್ದರೆ ಎಲ್ಲವೂ ಸುಂದರ' ಎಂದು ಒಬ್ಬರು ಹೇಳಿದರೆ, 'ಹೌದು ಹೌದು, ಶ್ರೀಮಂತನಾಗಿದ್ದರೆ ಎಲ್ಲಿಯೂ ಬದುಕಬಹುದು. ಅವನ ಕಣ್ಣಿಗೆ ಎಲ್ಲವೂ ಸುಂದರ' ಎಂದು ಇನ್ನೊಬ್ಬರು ಮಾತು ಸೇರಿಸುತ್ತಾರೆ.



ಪರಿಸರ ರಕ್ಷಣೆಗೆ ನೇರವಾಗಿ ಸಂಬಂಧಿಸಿದ ಒಂದು ಮುಖ್ಯ ವಿಷಯವೆಂದರೆ, ಇಡೀ ದೇಶದಲ್ಲಿ ಪರಿಸರದ ಕುರಿತಾದ ಯಾವ ಅರಿವೂ ಇಲ್ಲದ, ಕೃಷಿಕರೂ ಸೇರಿದಂತೆ ಸರ್ವ ಗ್ರಾಮೀಣ ಪ್ರದೇಶದ ನಿವಾಸಿಗಳಿಗೆ ಎಲ್ಲಾ ಮಾಧ್ಯಮಗಳ ಮೂಲಕ ಪರಿಸರದ ಕುರಿತಾಗಿ ಎಲ್ಲಾ ಅರಿವನ್ನು ನೀಡುವ ಕೆಲಸ. ಅದರಲ್ಲಿ ಮುಖ್ಯವಾಗಿ ನೆನಪಿಡಬೇಕಾದದ್ದು– ಪರಿಸರದಲ್ಲಿ ಕೃಷಿಯೊಂದಿಗೆ ನೈಸರ್ಗಿಕವಾಗಿ ಉಂಟಾಗುವ ಒಣ ಹುಲ್ಲು, ಗೋಧಿ, ಭತ್ತ, ರಾಗಿ ಮುಂತಾದವುಗಳ ಕಟಾವಿನ ಬಳಿಕ ನಂತರದ ಅವಶೇಷಗಳು, ಬೈಹುಲ್ಲು ತರಗೆಲೆ, ಹೊಟ್ಟು ಮುಂತಾದ ಒಣ ಸಸ್ಯಗಳ ಪೈಕಿ ಏನನ್ನೂ ಸುಡಬಾರದು. ಸುಟ್ಟರೆ ಒಂದಲ್ಪ ಪೊಟಾಶ್‌ನ ಹೊರತು ಬೇರೆ ಯಾವುದೂ ಗೊಬ್ಬರವಾಗಿ ಮಣ್ಣು ಸೇರುವುದಿಲ್ಲ; ಅದೆಲ್ಲವೂ ಮಳೆ ನೀರು ಮತ್ತು ಮನುಷ್ಯರು ಬಳಸುವ ನೀರಿನ ನೆರವಿನಿಂದ ಕೊಳೆತು ನೈಸರ್ಗಿಕವಾಗಿಯೇ ಮಣ್ಣು ಸೇರಬೇಕು. ಅದರಲ್ಲಿರುವ ಜೀವಸತ್ವಗಳು ಮಣ್ಣು ಸೇರಿ ಭೂಮಿ ಫಲವತ್ತಾಗುತ್ತದೆ ಎಂಬ ಅರಿವು ಎಲ್ಲರಿಗೂ ಉಂಟಾಗಬೇಕು. ಅದು ನಿಸರ್ಗವೇ ನೀಡುವ ಸಾವಯವ ಗೊಬ್ಬರ. ಹಸಿರೆಲೆ, ಗಂಜಳ, ಮುಂತಾದವು ಹೊರಗಿಂದ ಮನುಷ್ಯ ಹಾಕುವ ಸಾವಯವ ಗೊಬ್ಬರ. ಈ ಅರಿವನ್ನು ಎಲ್ಲಾ ಮಾಧ್ಯಮಗಳ ಮೂಲಕ ಇಡೀ ದೇಶದ ಕೃಷಿಕರಿಗೆ ನೀಡುವುದು ಪರಿಸರ ರಕ್ಷಣಾ ಖಾತೆಯ ಪ್ರಧಾನ ಕೆಲಸವಾಗಬೇಕು. ಕೃಷಿಕರಿಗೆ ಮಾತ್ರವಲ್ಲ, ಶಾಲೆ ಕಾಲೇಜಿನಲ್ಲಿ ಓದುವ ಮಕ್ಕಳಿಗೂ ಈ ಜ್ಞಾನ ದೊರೆಯುವಂತಾಗಬೇಕು.

ಅಮೆರಿಕಾ ಮತ್ತು ಆ ಶೈಲಿಯಲ್ಲೇ ಮುಂದುವರಿದ ದೇಶ ಎನ್ನಬಹುದಾದ ಹೆಚ್ಚಿನ ದೇಶಗಳಲ್ಲಿ ನೂರಾರು ಎಕರೆ ವಿಸ್ತೀರ್ಣದ ಕೃಷಿ ಎಸ್ಟೇಟಿನ ಯಜಮಾನರಿದ್ದಾರೆ. ಅಲ್ಲಿ ಯಂತ್ರಗಳ ದುಡಿತದಿಂದ ಗೋಧಿ, ಬಾರ್ಲಿ, ಜೋಳ, ಶೇಂಗಾ ಇತ್ಯಾದಿ ಎಲ್ಲವನ್ನೂ ಬೆಳೆಯುತ್ತಾರೆ.

ಭಾರತದಲ್ಲಿ ಹಾಗೆ ಅಲ್ಲ, ಇಲ್ಲಿ ಲಕ್ಷಾಂತರ ಸಣ್ಣ ಹಿಡುವಳಿದಾರರಿದ್ದಾರೆ. ಈ ಹಿಡುವಳಿಗಳು ಅಕ್ಕಿ, ಗೋಧಿ, ರಾಗಿ ಬೆಳೆಯುವ ಹೊಲ ಗದ್ದೆಗಳಾಗಿರಬಹುದು. ಚಿಕ್ಕಪುಟ್ಟ ತೆಂಗು, ಕಂಗು, ಬಾಳೆ ಇತ್ಯಾದಿಗಳಲ್ಲಿ ಬದುಕು ಮಾಡುವ ಕೃಷಿಕರಾಗಿರಬಹುದು.

ಕೃಷಿಕರ ಬೆಳೆಗಳಿಗೆ ಮತ್ತು ಬದುಕಿಗೆ ರಕ್ಷಣೆ ಇಲ್ಲ ಎಂದಾದರೆ, ಅವರು ತಮ್ಮ ಹಿಡುವಳಿಗಳನ್ನು ಮನೆ, ಅಂಗಡಿ ಹೋಟೆಲು ಮತ್ತಿತರ ಕಟ್ಟಡ ನಿರ್ಮಿಸುವವರಿಗೆ ಅಥವಾ ಕಡಿಮೆ ಬೆಲೆಗೆ ಕೊಂಡು ಹೆಚ್ಚು ಬೆಲೆಗೆ ಮಾರುವ ಹೂಡಿಕೆಗಾರರಿಗೆ ಮಾರಿ, ನಗರ ಸೇರುತ್ತಾರೆ. ಅಲ್ಲಿ ಸೇಲ್ಸ್‌ಮ್ಯಾನ್ ಆಗಿ, ಹೋಟೆಲು ಮಾಣಿಯಾಗಿ, ಕಟ್ಟಡ ನಿರ್ಮಾಣ ಇತ್ಯಾದಿ ಯಾವುದಾದರೊಂದು ಬಗೆಯ ಕೂಲಿಕಾರರಾಗಿ ನಗರವಾಸಿಗಳಾಗಿ ಬದಲಾದರೆ, ಅನ್ನದಾತ ಎಂದು ಸ್ತುತಿಸಲ್ಪಡುವ ರೈತ ಮಹಾತ್ಮನ ಗತಿ ಏನು? ಅನ್ನದಾತ ಯಾವತ್ತೂ ಇರುತ್ತಾನೆ ಎಂಬ ನಂಬಿಕೆಯಿಂದ ಹಣದ ಚೀಲ ಹಿಡಿದುಕೊಂಡು ಅಂಗಡಿ, ಆ ಮಾರ್ಕೆಟು, ಈ ಮಾರ್ಕೆಟು, ಸೂಪರ್ ಮಾರ್ಕೆಟು, ಮಾಲು ಇತ್ಯಾದಿಗಳಿಗೆ ವಾರಕ್ಕೆ ಮೂರಾವರ್ತಿ ಹೋಗುವ ಸಾಮಾನ್ಯ ಮಾನವನ ಅಥವಾ ಅಸಾಮಾನ್ಯ ಮಾನವನ ಬದುಕು ಹೇಗೆ ನಡೆದೀತು? ಈ ಕಾರಣದಿಂದ ಕಕ್ಕಾಬಿಕ್ಕಿಯಾಗಿ ರಸ್ತೆಯಲ್ಲಿ ನಿಂತು ಎಲ್ಲಿ ಏನು ಇದೆ ಎಂದು ಆ ಕಡೆ ಈ ಕಡೆ ಏನೂ ಇಲ್ಲದ ಕಡೆ ನೋಡುವ ಗತಿ ನಮಗೆಲ್ಲರಿಗೂ ಉಂಟಾಗಲಿಕ್ಕಿಲ್ಲವೆ? ಈಗ ಇರುವ ಭೂಮಿಮಾತೆ ಮತ್ತು ರೈತಪುತ್ರನ ಶ್ರೀಮಂತ ಸಂಬಂಧ ಎಷ್ಟು ಕಾಲ ಹೀಗೆಯೇ ಇದ್ದೀತು? ಕೃಷಿಕ ಇಲ್ಲವೆಂದಾದರೆ ನಿಸರ್ಗಸಹಜ ಪರಿಸರ ಎಲ್ಲಿ ಉಳಿದೀತು? ಹೇಗೆ ಉಳಿದೀತು?

ಮನುಷ್ಯ ಪರಿಸರವನ್ನು ರಕ್ಷಿಸಿದರೆ ಪರಿಸರ ಮನುಷ್ಯನನ್ನು ರಕ್ಷಿಸುತ್ತದೆ. ■